# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 249 | Pages. 2 | Date: 16-09-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 249 - ಪುಟಗಳು : 2 | 16-09-2026 | ಬುಧವಾರ | Ph: 8762954248 | ದರ : ₹1


# ವಿಜಯ ದಶಮಿಯಿಂದ ಯುದ್ಧಾರಂಭ ಎಂದ ಕುಮಾರಸ್ವಾಮಿ

## ಲಘು ಮಾತುಗಳಿಂದ ಉದ್ರೇಕಕ್ಕೊಳಗಾಗಲ್ಲ-ನಿದ್ದೆಗೆಡಬೇಡಿ ಕಾಯಿರಿ: ಕೇಂದ್ರ ಸಚಿವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದ ಅಕ್ರಮ ಹಾಗೂ ಹಗರಣಗಳ ಪೈಕಿ ಯಾವ ವಿಚಾರವನ್ನು ಮೊದಲು ಬಹಿರಂಗಪಡಿಸಬೇಕೆಂದು ಸಿದ್ಧತೆ ಮಾಡಿಕೊಂಡಿದ್ದು, ಸೂಕ್ತ ಸಮಯದಲ್ಲಿ ಎಲ್ಲವನ್ನೂ ದಾಖಲೆ ಸಮೇತ ಜನರ ಮುಂದಿಡುತ್ತೇನೆ. ಅಂತಿಮ ತೀರ್ಪನ್ನು ಜನತೆ ಹಾಗೂ ವ್ಯವಸ್ಥೆಯೇ ನೀಡಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಬೆಟ್ಟದಲ್ಲಿರುವ ಶ್ರೀ ರಂಗನಾಥಸ್ವಾಮಿ ಸನ್ನಿಧಿಗೆ ಭೇಟಿ ನೀಡಿ, ತಮ್ಮ ತಾಯಿಯವರ ಸಮಾಧಿಗೆ ತೆರಳಿ ಆಶೀರ್ವಾದ ಪಡೆದ ಬಳಿಕ ಮಾತನಾಡಿ,

ದಾಖಲೆ ಸಮೇತ ಹೋರಾಟ ನಡೆಸುವುದಾಗಿ ಪುನರುಚ್ಚರಿಸಿದರು.





> ಸಮಯ ನೋಡಿಕೊಂಡು ದಾಖಲೆ ಬಿಡುಗಡೆ ಮಾಡುವಂತೆ ಕೆಲ ಅನುಭವಸ್ಥರು ಸಲಹೆ ನೀಡಿದ್ದರು. ಆದರೆ ಈಗ ಆ ವಿಚಾರ ಔಟ್‌ಡೇಟ್ ಆಗಿದೆ. ಸುಮ್ಮನೆ ಯಾರನ್ನೂ ಹೆದರಿಸುವ ಪ್ರಶ್ನೆಯೇ ಇಲ್ಲ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಅಲ್ಲೋಲ-ಕಲ್ಲೋಲ ಉಂಟು ಮಾಡುವಂತಹ ವಿಷಯವೊಂದು ಜನರ ಮುಂದೆ ಬರಲಿದೆ. ಶೀಘ್ರವೇ ಆ ಕೆಲಸ ಮಾಡುವೆ.
>
> **- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ವಿಜಯದಶಮಿ ಸಮಯದಲ್ಲಿ ರಾಜಕೀಯ ಯುದ್ಧ ಆರಂಭವಾಗಲಿದೆ. ತಾವು ಒಂದು ಪದ ಬಳಸಿದ್ದಕ್ಕೆ ಕಳೆದ ಹತ್ತು ದಿನಗಳಿಂದ ತಾವು ಯಾವಾಗ ಬರುತ್ತಾರೆ ಎಂದು ಕೆಲವರು ಕಾಯುತ್ತಿದ್ದಾರೆ. ಮಾಧ್ಯಮ ಸ್ನೇಹಿತರಿಗೆ ನಿರಾಸೆ ಮಾಡುವುದಿಲ್ಲ, ಒಳ್ಳೆಯ ಆಹಾರ ನೀಡುತ್ತೇನೆ ಎಂದರು.

ವಿಜಯದಶಮಿ ಕಾಲದಲ್ಲಿ ರಾಜ-ಮಹಾರಾಜರು ಯುದ್ಧಕ್ಕೆ ತೆರಳುತ್ತಿದ್ದರು. ಈಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದಕ್ಕೂ ಗಂಟೆ ಹೊಡೆಯುತ್ತಿದೆ. ಶೀಘ್ರದಲ್ಲೇ ಕೆಲವು ವಿಚಾರಗಳನ್ನು ಪ್ರಾರಂಭಿಸುತ್ತೇನೆ, ನಿದ್ದೆ ಗೆಡಬೇಡಿ ಎಂದು ಹೇಳಿದರು.

ತಮ್ಮ ಬಳಿ ಇರುವ ಪೆನ್‌ಡ್ರೈವ್ ಕುರಿತು ಮಾತನಾಡಿದ ಕುಮಾರಸ್ವಾಮಿ, ಲಂಚ ಹಾಗೂ ವರ್ಗಾವಣೆಗಾಗಿ ಹಣ ವಸೂಲಿ ಕುರಿತು ಇಬ್ಬರು ಇಂಜಿನಿಯರ್‌ಗಳು ಮಾತನಾಡಿರುವ ದಾಖಲೆಗಳು ಅದರಲ್ಲಿವೆ ಎಂದು ಆರೋಪಿಸಿದರು.

ಅದು ಬೇರೆ ಯಾರದ್ದೂ ಅಲ್ಲ, ಮುಖ್ಯಮಂತ್ರಿಗೆ ಸಂಬಂಧಿಸಿದ ವಿಷಯ ಎಂದು ಅವರು ಹೇಳಿದರು.

ಅಮೇರಿಕ ಪ್ರವಾಸಕ್ಕೆ ತೆರಳುವ ಮುನ್ನ ಕೆಪಿಎಸ್ಸಿ, ಬಿಡದಿ ಹಾಗೂ ನೈಸ್ ಹಗರಣ ಕುರಿತು ಹಲವು ವಿಷಯ ಪ್ರಸ್ತಾಪಿಸಿದ್ದೆ. ಕೆಲ ವಿಚಾರಗಳನ್ನು ಸಾರ್ವಜನಿಕವಾಗಿ ದಾಖಲೆ ಸಮೇತ ಇಡುವುದಾಗಿಯೂ ಹೇಳಿದ್ದೆ. ಈ ಬಗ್ಗೆ ವಿರೋಧಿಗಳು ಲಘುವಾಗಿ ಮಾತನಾಡಿದರೂ ತಾವು ಉದ್ರೇಕಕ್ಕೆ ಒಳಗಾಗುವುದಿಲ್ಲ ಎಂದರು.

ಕೆಪಿಎಸ್ಸಿಯಲ್ಲಿ ಪಶುವೈದ್ಯರ ನೇಮಕಾತಿ ಹಾಗೂ ಎಇಇ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ ಅವರು, ಹುದ್ದೆ ಮಾರಾಟ ಮಾಡಿ ಹಣ ವಸೂಲಿ ಮಾಡಲಾಗಿದೆ. ಎಇಇ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದ ಸಾಕ್ಷ್ಯ ನೀಡಿದ್ದರೂ ಸಂಬಂಧ ಪಟ್ಟ ಸಚಿವರು ಉತ್ತರ ನೀಡಿದ್ದಾರೆಯೇ ಎಂದು ಪ್ರಶ್ನಿಸಿದರು.

ಅಧಿಕಾರದಲ್ಲಿರುವವರು ಪ್ರಾಮಾಣಿಕವಾಗಿ ಜನರ ಪರ ಕೆಲಸ ಮಾಡಿದರೆ ಸಂಪೂರ್ಣ ಬೆಂಬಲ ನೀಡುತ್ತೇನೆ. ಆದರೆ ಅಧಿಕಾರ ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಹಣ ದೋಚುವ ಪ್ರಯತ್ನ ನಡೆದರೆ ಧ್ವನಿ ಎತ್ತಲೇಬೇಕಾಗುತ್ತದೆ ಎಂದು ಹೇಳಿದರು.

ನೂರು ದಿನದಲ್ಲಿ ಸರ್ಕಾರ ಏನು ಕೆಲಸ ಮಾಡಿದೆ ಎಂಬುದನ್ನು ಪಟ್ಟಿ ಮಾಡಿ. ಆ ಪಟ್ಟಿಯನ್ನೇ ತೆಗೆದುಕೊಂಡು ಚರ್ಚೆ ಮಾಡೋಣ ಎಂದು ಸವಾಲು ಹಾಕಿದರು.

ಕಾಂಗ್ರೆಸ್ ನಾಯಕರಾದ ರಾಜಣ್ಣ, ರಮೇಶ್ ಜಾರಕಿಹೊಳಿ ಹಾಗೂ ಸತೀಶ್ ಜಾರಕಿಹೊಳಿ ಅವರನ್ನು ಉಲ್ಲೇಖಿಸಿ, ರಾಜಕೀಯವಾಗಿ ಅವರನ್ನು ಹೇಗೆ ಮುಗಿಸಲು ಸಿದ್ಧತೆ ನಡೆಸಲಾಯಿತು ಎಂದೂ ಗೊತ್ತಿಗೆ ಎಂದು ಹೆಚ್ಡಿಕೆ ಹೇಳಿದರು.

ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಹೆಚ್ಡಿಕೆ, ನನ್ನ ಮನೆ ಅಲುಗಾಡಿಸಿರುವುದು ಯಾರು ಎಂಬುದು ನಿಮಗೆ ಗೊತ್ತಿದೆ. ದೇವೇಗೌಡರ ಕುಟುಂಬವನ್ನು ಮುಗಿಸುತ್ತೇವೆ ಎಂದು ಯಾರು ಹೇಳಿದ್ದರು, ಈ ಮುಖ್ಯಮಂತ್ರಿಯೇ ಅಲ್ಲವೇ ಎಂದು ಪ್ರಶ್ನಿಸಿದರು.

ಪೆನ್‌ಡ್ರೈವ್ ಹಾಗೂ ಅಶ್ಲೀಲ ಚಿತ್ರಗಳ ಪ್ರಕರಣ ಪ್ರಸ್ತಾಪಿಸಿದ ಕುಮಾರಸ್ವಾಮಿ, 2 ವರ್ಷಗಳಿಂದ ಜೈಲಿನಲ್ಲಿರುವ ವ್ಯಕ್ತಿ ಬಳಿ ಈಗ ಫೋನ್ ಇದೆ ಎನ್ನುತ್ತಿದ್ದಾರೆ. ಜೈಲಿನೊಳಗೆ ಫೋನ್ ಹೇಗೆ ಬಂತು, ಅಶ್ಲೀಲ ಚಿತ್ರಗಳನ್ನು ಯಾರು ನೀಡಿದರು, ಫೋನ್ ಪೂರೈಸಿದವರು ಯಾರು ಎಂದು ಪ್ರಶ್ನಿಸಿದರು.

ಬಿಡದಿ, ಕೆಪಿಎಸ್ಸಿ ಹಾಗೂ ನೈಸ್ ವಿಚಾರಗಳಲ್ಲಿ ತಮ್ಮ ಕುಟುಂಬದ ಧ್ವನಿ ಅಡಗಿಸಲು ಆ ಪ್ರಕರಣ ಬಳಸಿಕೊಳ್ಳಲಾಗುತ್ತಿದೆ. ಆ ಹುಡುಗನ ಹೆಸರು ಇಟ್ಟುಕೊಂಡು ದೇವೇಗೌಡರ ಕುಟುಂಬದ ಧ್ವನಿ ಮುಚ್ಚಿಸಲು ಸಾಧ್ಯವಿಲ್ಲ. ಏನೇನು ನಡೆಸಿದ್ದೀರಿ ಎಂಬುದಕ್ಕೆ ಕಾಲ ಉತ್ತರ ನೀಡಲಿದೆ ಎಂದರು.

ಇದಕ್ಕೂ ಮುನ್ನ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿರುವ ತಾಯಿ

ದಿ. ಚೆನ್ನಮ್ಮ ಅವರ ಸಮಾಧಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಸಮಾಧಿಗೆ ಪ್ರದಕ್ಷಿಣೆ ಹಾಕಿ ತಾಯಿ ಆಶೀರ್ವಾದ ಪಡೆದ ಬಳಿಕ, ಬೆಟ್ಟದ ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ತೆರಳಿದ ಅವರು ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಕುಟುಂಬ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

### ಸರ್ವನಾಶ ಮಾಡುವುದು ಆದ್ಯತೆ

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಸರ್ವನಾಶ ಮಾಡುವುದು ಮೊದಲ ಆದ್ಯತೆಯಾಗಿದೆ ಎಂದು ಆರೋಪಿಸಿದ ಅವರು, ತಮ್ಮ ವಿರುದ್ಧದ ಆರೋಪಗಳಿಗೆ ಹೆದರುವುದಿಲ್ಲ. ನ್ಯಾಯ ಮತ್ತು ಸತ್ಯಕ್ಕೆ ತಲೆಬಾಗುತ್ತೇನೆ. ತಪ್ಪು ಮಾಡಿದ್ದರೆ ತಲೆಬಾಗಲು ಸಿದ್ಧ. ಆದರೆ ನಿಮ್ಮಂತೆ ಎಲ್ಲವನ್ನೂ ಬಿಟ್ಟು ದೋಚುವ ಕೆಲಸ ಮಾಡುವುದಿಲ್ಲ. ನಮ್ಮ ಧ್ವನಿಯನ್ನು ಸ್ತಬ್ಧ ಮಾಡಲು ಸಾಧ್ಯವಿಲ್ಲ. ಹೋರಾಟ ಮಾಡಲೇಬೇಕು ಎಂದು ಕುಮಾರಸ್ವಾಮಿ ಹೇಳಿದರು.

ತಮ್ಮ ತಾಯಿ ಹಾಗೂ ಕುಟುಂಬದ ವಿರುದ್ಧ ಬಳಸಿರುವ ಪದಗಳನ್ನೂ ಪ್ರಸ್ತಾಪಿಸಿದ ಕೇಂದ್ರ ಸಚಿವರು, ನಾನು ಎಲ್ಲಿಗೂ ಹೋಗುವುದಿಲ್ಲ. ಜನರ ಜೊತೆ ಇರುತ್ತೇನೆ. ದೇವೇಗೌಡರು ತಮ್ಮ ರಾಜಕೀಯ ಜೀವನದುದ್ದಕ್ಕೂ ಅಕ್ರಮದ ವಿರುದ್ಧ ಹೋರಾಡಿಕೊಂಡು ಬಂದಿದ್ದಾರೆ, ನಾನೂ ಅಂತೆಯೇ ಎಂದು ಎಚ್ಚರಿಸಿದರು.



## ಸರ್ಕಾರಿ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ನಮ್ಮ ಜವಾಬ್ದಾರಿಯಾಗಿದೆ. ಮುಂದಿನ ದಿನಗಳಲ್ಲಿ ಸಕಲೇಶಪುರ ಪದವಿಪೂರ್ವ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಸಕಲೇಶಪುರ ಪದವಿಪೂರ್ವ ಕಾಲೇಜಿನಲ್ಲಿ 2004ನೇ ಸಾಲಿನ ಎಸ್‌ಎಸ್‌ಎಲ್‌ಸಿ 'ಬಿ ಸೆಕ್ಷನ್' ವಿದ್ಯಾರ್ಥಿಗಳ ಸಹಯೋಗದಲ್ಲಿ ನಿರ್ಮಿಸಿರುವ ನೂತನ ನಾಮಫಲಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿಗಳು ಐಎಎಸ್, ಕೆಎಎಸ್, ಐಪಿಎಸ್ ಸೇರಿದಂತೆ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅಂತಹ ಹಳೆಯ ವಿದ್ಯಾರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿದ ಕಾಲೇಜಿನ ಉಳಿವು ಹಾಗೂ ಅಭಿವೃದ್ಧಿಗೆ ಕೈಜೋಡಿಸಬೇಕು. ಕಾಲೇಜಿನೊಂದಿಗೆ ತಮ್ಮ ಸಂಬಂಧವನ್ನು ಮುಂದುವರಿಸಿಕೊಂಡು, ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ನೆರವಾಗಬೇಕು ಎಂದು ಮನವಿ ಮಾಡಿದರು.




ನಾನು ಶಾಸಕನಾಗಿ ಆಯ್ಕೆಯಾದ ಬಳಿಕ ಕಾಲೇಜಿನ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇನೆ. ಶೌಚಾಲಯ, ಕಾಂಪೌಂಡ್, ಮೇಲ್ಛಾವಣಿ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇನ್ನೂ ಅಗತ್ಯವಿರುವ ಸೌಲಭ್ಯಗಳನ್ನು ಹಂತಹಂತವಾಗಿ ಕಲ್ಪಿಸಿ ಕಾಲೇಜನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು. 'ಮೊದಲು ರಾಷ್ಟ್ರೀಯತೆ ಮೈಗೂಡಿಸಿಕೊಳ್ಳಿ' ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ರಾಷ್ಟ್ರೀಯತೆಯ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ದೇಶದ ಬಗ್ಗೆ ಅಭಿಮಾನ, ಸಾಮಾಜಿಕ ಜವಾಬ್ದಾರಿ ಹಾಗೂ ಸೇವಾ ಮನೋಭಾವ ಬೆಳೆಸಿಕೊಂಡು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಸಿಮೆಂಟ್ ಮಂಜು ಕರೆ ನೀಡಿದರು.

ತಮ್ಮ ಕಾಲೇಜು ದಿನಗಳ ನೆನಪುಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ಶಾಸಕರು, ವಿದ್ಯಾರ್ಥಿ ಜೀವನದಲ್ಲಿ ಕಲಿತ ಶಿಸ್ತು, ಮೌಲ್ಯಗಳು ಹಾಗೂ ಅನುಭವಗಳು ಮುಂದಿನ ಬದುಕಿಗೆ ದಾರಿದೀಪವಾಗುತ್ತವೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳು ಬಡ ಮಕ್ಕಳ ಭವಿಷ್ಯ ರೂಪಿಸುವ ಪ್ರಮುಖ ಕೇಂದ್ರಗಳಾಗಿದ್ದು, ಅವುಗಳನ್ನು ಉಳಿಸಿ ಬೆಳೆಸುವುದು ಎಲ್ಲರ ಜವಾಬ್ದಾರಿ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, 2004ನೇ ಸಾಲಿನ ಹಳೆಯ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಮನೆಗೊಂದು ಗ್ರಂಥಾಲಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ಹಾಸನ ಜಿಲ್ಲಾ ಜಾಗೃತಿ ಸಮಿತಿ ವತಿಯಿಂದ ಹಾಸನದ ಶ್ರೀಮತಿ ಮಾಳೇಟಿರ ಸೀತಮ್ಮ ವಿವೇಕ್ ಅವರ ನಿವಾಸದಲ್ಲಿ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ ನಡೆಯಿತು. ಪ್ರಾಧಿಕಾರದ ಸದಸ್ಯರು ಡಾ. ಕುಶಾಲ ಬರಗೂರು ಉದ್ಘಾಟಿಸಿ ಮಾತನಾಡಿ.

ಪುಸ್ತಕ ಓದಿನ ಮೂಲಕ ಹೊಸ ತಲೆಮಾರಿನ ಯುವಕರು ವ್ಯಕ್ತಿತ್ವ ವಿಕಸನದ ಮೂಲಕ, ಉದ್ಯೋಗ, ಕೌಟುಂಬಿಕ, ಸಾಮಾಜಿಕ, ರಾಜಕೀಯ, ರಾಷ್ಟ್ರೀಯ ಪ್ರಜ್ಞೆ ಜಾಗೃತಿಗೊಳಿಸುವ, ಒಂದೊಂದು ಮನೆಯಲ್ಲಿ ಪುಸ್ತಕ ಚರ್ಚೆ ಮಾಡಿ, ಜೀವನ ಧನಾತ್ಮಕ ಚಿಂತನೆ ಬಿತ್ತಿ ಶಿಕ್ಷಣ ಜಾಗೃತಿ ಮೂಡಿಸುವುದಾಗಿದೆ. ಪುಸ್ತಕವು ಏಕಮುಖಿ ಜೀವನ ಪಾಠ ಬೋಧಿಸುವುದಿಲ್ಲ ಅದು ಬಹುಮುಖಿ ಜೀವನ ಪಾಠಗಳನ್ನು ಪ್ರತಿಪಾದಿಸುತ್ತದೆ. ಪುಸ್ತಕ ಓದುವ ಪುಸ್ತಕ ಪ್ರೀತಿ ಜನಮನ ತಲುಪಿಸುವುದು ಮನೆಗೊಂದು ಗ್ರಂಥಾಲಯದ ಆಶಯ ಎಂದರು.




ಮನಸ್ಸು ಕೃತಿ ಲೇಖಕಿ ಶ್ರೀಮತಿ ಮಾಳೇಟಿರಾ ಸೀತಮ್ಮ ವಿವೇಕ್ ಮಾತನಾಡಿ ಈ ಭೂಮಿಯಲ್ಲಿ ಗಂಡು ಹೆಣ್ಣು ಎಂಬುದಿಲ್ಲ. ಸಾರ್ವತ್ರಿಕ ಮನಸ್ಸು ಮತ್ತು ಮನಸ್ಸಿನ ಸತ್ಯಾಸತ್ಯತೆಯನ್ನು ಅನಾವರಣಗೊಳಿಸುವ ಪರಿಪೂರ್ಣ ಕೆಲಸ ಮಾಡಲು ಸಾಧ್ಯ. ನಾವು ನಮ್ಮ ಮನಸ್ಸು ಮತ್ತು ಶರೀರವನ್ನು ಅರಿತರೆ, ಮತ್ತೊಬ್ಬರ ದೃಷ್ಟಿಕೋನ, ಉದ್ದೇಶಗಳನ್ನು ಗ್ರಹಿಸಬಲ್ಲವು ಎಂದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ ಧ್ಯಾನದ ವಿಶೇಷತೆ ತಿಳಿಸುವ ಲೇಖಕಿ ತಮ್ಮ ಕುಟುಂಬ ಹಿಮಾಚಲಪ್ರದೇಶಕ್ಕೆ ಪ್ರವಾಸ ತೆರಳಿ ಮನಾಲಿಯ ಹಿಡಿಂಬ ದೇಗುಲದಿಂದ ರೋಹತಂಗ್ ಪಾಸ್‌ನ ಪರ್ವತದೆಡೆ ಏರುವಾಗ ಉಸಿರಾಟ ತೊಂದರೆಗೆ ಸಿಲುಕಿ ಅವರು ಜ್ಞಾನತಪ್ಪಿ ಬಿದ್ದು ಅವರ ಮನಸ್ಸು ಹಿಮಚ್ಛಾದಿತ ಬೆಟ್ಟದ ಸೌಂದರ್ಯವನ್ನು ವೀಕ್ಷಿಸಿದ್ದು ಆಶ್ಚರ್ಯವೆನಿಸಿದೆ ಎಂದರು.

ಲೇಖಕಿ ಕೆ.ಟಿ.ಜಯಶ್ರೀ ಕೃತಿ ವಿಮರ್ಶಿಸಿ ಮನುಷ್ಯನ ಮನಸ್ಸಿನ ವ್ಯಾಪ್ತಿ ಬಹಳ ಆಳ ಹಾಗೂ ವಿಶಾಲವಾದುದು, ನಾವು ಅಂತರ್ಮುಖಿಯಾಗಿ ಸಂವಾದ ನಡೆಸುವುದನ್ನು ಕೃತಿ ವಿಶ್ಲೇಶಿಸುವುದು ಎಂದರು.

ಕವಿ ಎನ್.ಎಲ್.ಚನ್ನೇಗೌಡ, ಅರಕಲಗೂಡು ಮಧುಸೂದನ್, ಯು.ಜೆ.ಮಲ್ಲಿಕಾರ್ಜುನ, ಸಮುದ್ರವಳ್ಳಿ ವಾಸು, ಧರ್ಮರಾಜ ಕಡಗ, ಕಾಳ ಮೈಸೂರು, ವಿವೇಕ್ ಪೊನ್ನಪ್ಪ, ಶಿವು, ವಿಪುಲ್ ಪೂವಯ್ಯ ಇದ್ದರು. ಶ್ರೀಮತಿ ಪದ್ಮಶ್ರೀ ಪ್ರಾರ್ಥಿಸಿದರು. ಹಾಸನ ಜಿಲ್ಲಾ ಜಾಗೃತಿ ಸಮಿತಿ ಸಂಚಾಲಕರು ಗೊರೂರು ಅನಂತರಾಜು ಸ್ವಾಗತಿಸಿ ಸದಸ್ಯರು ಶ್ರೀಮತಿ ಸುವರ್ಣ ಸಿ. ವಂದಿಸಿದರು.

## ಅರಸೀಕೆರೆ: 85ನೇ ಗಣೋತ್ಸವಕ್ಕೆ ಚಾಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ರಾಜ್ಯದಲ್ಲೇ ಪ್ರಸಿದ್ಧಿಯಾಗಿರುವ ಪ್ರಸನ್ನ ಗಣಪತಿಯ 85ನೇ ವರ್ಷದ ಮಹೋತ್ಸವಕ್ಕೆ ಚಾಲನೆ ದೊರೆತಿದೆ. ಭಾದ್ರಪದ ಮಾಸದ ಚೌತಿಯಂದು ತನ್ನ ಆಸ್ಥಾನ ಮಂಟಪದಲ್ಲಿ ವಿರಾಜಮಾನನಾಗಿ ಮುಂದಿನ 65 ದಿನಗಳ ಕಾಲ ತನ್ನ ಭಕ್ತರಿಂದ ತ್ರಿಕಾಲ ಪೂಜೆ ಪಡೆದು ದರ್ಶನ ಭಾಗ್ಯ ಕರುಣಿಸುವ ಪ್ರಸನ್ನ ಗಣಪತಿಯನ್ನು ನೋಡುವುದೇ ಕಣ್ಣಿಗೆ ಹಬ್ಬ.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಿಲ್ಪಿ ಮಹದೇವು ಅವರು ನಿರ್ಮಿಸಿರುವ 9 ಅಡಿ ಎತ್ತರದ ಆಸೀನ ಭಂಗಿಯಲ್ಲಿರುವ ಬೃಹತ್ ಗಾತ್ರದ ಮಣ್ಣಿನ ಪ್ರಸನ್ನ ಗಣಪತಿ ಮೂರ್ತಿ ಮೂಡಿ ಬಂದಿದ್ದು ಭಕ್ತರ ಕಣ್ಮನ ಸೆಳೆಯುತ್ತಿದೆ. ಪೂರ್ಣ ಕುಂಭದೊಂದಿಗೆ ಮಂಗಳವಾದ್ಯ ಸಮೇತ ಪ್ರಸನ್ನ ಗಣಪತಿಯನ್ನು ಆಸ್ಥಾನ ಮಂಟಪಕ್ಕೆ ಮೆರವಣಿಗೆ ಮೂಲಕ ಕರೆ ತರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ ಶಿವಲಿಂಗೇಗೌಡ ಸೇರಿದಂತೆ ನಾನಾ ರಾಜಕೀಯ ಪಕ್ಷಗಳ ಮುಖಂಡರು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಪ್ರಸನ್ನ ಗಣಪತಿ ಭಕ್ತ ಮಂಡಳಿಯ ಪ್ರಮುಖರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ: ಪ್ರಸನ್ನ ಗಣಪತಿಯಂತೆ, ಪ್ರತಿದಿನ ಇಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ಭಕ್ತರ ಅಚ್ಚು ಮೆಚ್ಚಿಗೆ ಕಾರಣವಾಗಿದೆ.

## ಚನ್ನರಾಯಪಟ್ಟಣದಲ್ಲಿ ಶ್ರೀ ಪ್ರಸನ್ನ ಗಣಪತಿ ಪ್ರತಿಷ್ಠಾಪನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ : ಪಟ್ಟಣದ ಗಣಪತಿ ಪೆಂಡಾಲ್ ಸೇರಿದಂತೆ ತಾಲ್ಲೂಕಿನಾದ್ಯಂತ ಶ್ರೀ ಗಣೇಶ ಚತುರ್ಥಿ ಪ್ರಯುಕ್ತ ಶ್ರೀ ಗೌರಿ ಹಾಗೂ ಗಣೇಶ ಮೂರ್ತಿಯ ಪ್ರತಿಷ್ಠಾಪನಾ ಕಾರ್ಯಕ್ರಮ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಸೋಮವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಶ್ರೀ ಗೌರಮ್ಮ ದೇವಿಯನ್ನು ಗಂಗೆ ಪೂಜೆಯೊಂದಿಗೆ ತಂದು ಪ್ರತಿಷ್ಠಾಪಿಸಲಾಗಿತ್ತು. ನಂತರ ಪುಷ್ಪ ಮಂಟಪದಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿವಿಧ ಪುಷ್ಪಗಳಿಂದ ಅಲಂಕರಿಸಲಾಯಿತು.



ಬಳಿಕ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಹೆಣ್ಣು ಮಕ್ಕಳು ಪೂಜೆಯಲ್ಲಿ ಪಾಲ್ಗೊಂಡು ಹೂವು-ಕಾಯಿ, ಸಿಹಿ ಕಡುಬು, ಕರಂಜಿಕಾಯಿ, ಸಜ್ಜಿಗೆ, ಲಡ್ಡು ಹಾಗೂ ಹಣ್ಣುಗಳನ್ನು ಅರ್ಪಿಸಿ ಗೌರಿ-ಗಣೇಶ ದರ್ಶನ ಪಡೆದರು.

ಗಣೇಶ ಚತುರ್ಥಿಯಂದು ಶ್ರೀ ಗೌರಿ ಹಾಗೂ ವಿನಾಯಕ ಮೂರ್ತಿಯನ್ನು ಮನೆಗಳಲ್ಲಿ ಪೂಜಿಸಿ ಮೂರನೇ ದಿನ ವಿಸರ್ಜನೆ ಮಾಡಿದರೆ, ಬಹುತೇಕ ಗ್ರಾಮಗಳಲ್ಲಿ ತಿಂಗಳ ವರೆಗೆ ಪೂಜಿಸಲಾಗುತ್ತದೆ. ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಏರ್ಪಡಿಸಲಿದ್ದು ಪ್ರಸಾದ ವಿನಿಯೋಗ ನಡೆಯಲಿದೆ. ಪ್ರತಿ ದಿನವೂ ಒಂದೊಂದು ಮನೆಯಂತೆ ಪೂಜೆ ಸಲ್ಲಿಸುವುದು ವಿಶೇಷ.

ಪಟ್ಟಣದ ಗಣಪತಿ ಪೆಂಡಾಲ್ ನಲ್ಲಿ ಸೋಮವಾರ ಮಧ್ಯಾಹ್ನ ಶ್ರೀ ಪ್ರಸನ್ನ ಗಣಪತಿ ಪ್ರತಿಷ್ಠಾಪನ ಕಾರ್ಯಕ್ರಮ ವೈಭವದಿಂದ ಜರಗಿದ್ದು ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ಎಂಎಲ್ಸಿ ಎಂ.ಎ.ಗೋಪಾಲಸ್ವಾಮಿ, ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್, ಟಿಎಪಿಸಿಎಂಎಸ್ ಅಧ್ಯಕ್ಷ ಮೆಡಿಕಲ್ ವೆಂಕಟೇಶ್, ಪರಿಸರ ಪ್ರೇಮಿ ಸಿ.ಎನ್.ಅಶೋಕ್, ಕಸಾಪ ತಾಲ್ಲೂಕು ಅಧ್ಯಕ್ಷ ಎಚ್.ಎನ್.ಲೋಕೇಶ್, ಪ್ರಮುಖರಾದ ಜೈದೀಪ್ ಗೌಡ, ನಂಜುಂಡ ಮೈಮ್, ರಾಜಕುಮಾರ್, ಆನಂದ್ ಕೆಂಪೇಗೌಡ ಹಾಗೂ ಇತರರು ಇದ್ದರು.

# ಟಿ.ಎನ್.ಸೀ ಅವರ ಮುಂದಿನ ಅಧ್ಯಾಯ

## ಭೂಮಿಕಾ ಟಾಕೀಸ್‌ನಲ್ಲಿ ಪ್ರಸಾರ: ಸೆ.19ರಂದು ಹಾಸನದಲ್ಲಿ ಬಿಡುಗಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕನ್ನಡ ಕಿರುತೆರೆ ವೀಕ್ಷಕರಿಗೆ ದೈನಂದಿನ ಬದುಕಿನ ಭಾಗವಾಗಿದ್ದ, ಮಾಯಾಮೃಗ, ಮುಕ್ತ, ಮಗಳು ಜಾನಕಿ ಖ್ಯಾತಿಯ ಹಿರಿಯ ನಿರ್ದೇಶಕ ಟಿ.ಎನ್.ಸೀತಾರಾಂ (ಟಿಎನ್‌ಎಸ್) ಈಗ ಡಿಜಿಟಲ್ ಜಗತ್ತಿಗೆ ಅಧಿಕೃತವಾಗಿ ಹೆಜ್ಜೆಯಿಡುತ್ತಿದ್ದಾರೆ.

ಅವರ ಬಹುನಿರೀಕ್ಷಿತ ಮುಂದಿನ ಅಧ್ಯಾಯ ವೆಬ್ ಸೀರಿಸ್ ಪ್ರೇಕ್ಷಕರ ಎದುರು ಬರಲು ಸಜ್ಜಾಗಿದೆ ಎಂದು ಪತ್ರಕರ್ತ ಹಾಗೂ ಚಲನಚಿತ್ರ ನಿರ್ದೇಶಕ ಮಂಜು ಬನವಾಸೆ ಹಾಗೂ ಪತ್ರಕರ್ತ ಹಾಗೂ ದಲಿತ ಹೋರಾಟಗಾರ ಹೆತ್ತೂರು ನಾಗರಾಜ್ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭೂಮಿಕಾ ಟಾಕೀಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಆಗಲಿದ್ದು, ದಶಕಗಳ ಕಾಲ ಟಿವಿ ಪರದೆ ಮೂಲಕ ಮೋಡಿ ಮಾಡಿದ್ದ ಟಿಎನ್‌ಎಸ್ ಅವರ ಈ ಹೊಸ ಪ್ರಯತ್ನವನ್ನು ವೀಕ್ಷಕರು ಭೂಮಿಕಾ ಟಾಕೀಸ್‌ಯೂಟ್ಯೂಬ್ ಚಾನೆಲ್‌ನಲ್ಲಿ ವೀಕ್ಷಿಸಬಹುದಾಗಿದೆ.

ಟಿವಿ ಧಾರಾವಾಹಿಗಳ ಮಿತಿಯಿಂದ ಹೊರಬಂದು, ಹೆಚ್ಚು ಮುಕ್ತವಾಗಿ ಮತ್ತು ವೇಗವಾಗಿ ಕಥೆ ಹೇಳಲು ಅವರು ಈಗ ವೆಬ್ ಸೀರಿಸ್ ಹಾಗೂ ಯೂಟ್ಯೂಬ್ ವೇದಿಕೆ ಆಯ್ದುಕೊಂಡಿದ್ದಾರೆ ಎಂದರು.




ಹಾಸನದಲ್ಲಿ ಮೊದಲ ಎಪಿಸೋಡ್ ಬಿಡುಗಡೆ ಕಾರ್ಯಕ್ರಮ ಈ ವಿಶಿಷ್ಟ ವೆಬ್ ಸೀರಿಸ್‌ನ ಮೊದಲ ಸಂಚಿಕೆಯ ಬಿಡುಗಡೆ ಹಾಗೂ ಅನಾವರಣ ಕಾರ್ಯಕ್ರಮವನ್ನು ಹಾಸನದಲ್ಲಿ ಆಯೋಜಿಸಲಾಗಿದೆ. ಸೆ.19 ರಂದು ಸಂಜೆ 5.30ಕ್ಕೆ ನಗರದ ಎಂಜಿ ರಸ್ತೆಯ ಗಾಂಧಿ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ. ಸ್ಥಳೀಯ ವೀಕ್ಷಕರು ಹಾಗೂ ಟಿಎನ್‌ಎಸ್ ಅಭಿಮಾನಿಗಳಿಗೆ ಮುಖಾಮುಖಿಯಾಗಿ ಈ ಹೊಸ ಡಿಜಿಟಲ್ ಪಯಣಕ್ಕೆ ಮುನ್ನುಡಿ ಬರೆಯಲು ಚಿತ್ರತಂಡ ಸಿದ್ಧತೆ ನಡೆಸಿದೆ ಎಂದರು.

ಮುಂದಿನ ಅಧ್ಯಾಯದಲ್ಲಿ ಏನಿರಲಿದೆ:

ನ್ಯಾಯಾಲಯದ ಕಟಕಟೆ ಮತ್ತು ಸಂಘರ್ಷ: ಸೀತಾರಾಂ ಅವರ ಟ್ರೇಡ್‌ಮಾರ್ಕ್ ಕೋರ್ಟ್ ರೂಮ್ ಡ್ರಾಮಾಗಳು, ಸಮಾಜದ ವ್ಯವಸ್ಥೆ ಮತ್ತು ಕಾನೂನಿನ ನಡುವಿನ ಹೋರಾಟಗಳು ಈ ಸರಣಿಯಲ್ಲೂ ರೋಚಕವಾಗಿ ಮೂಡಿಬರುವ ನಿರೀಕ್ಷೆಯಿದೆ.

ಮಧ್ಯಮ ವರ್ಗದ ನೈಜ ಬದುಕು: ಸಾಮಾನ್ಯ ಜನರ ಕಷ್ಟ-ಸುಖಗಳು, ಕುಟುಂಬದೊಳಗಿನ ತಲ್ಲಣಗಳು ಹಾಗೂ ಮೌಲ್ಯಗಳ ಸಂಘರ್ಷವನ್ನು ಎಂದಿನಂತೆ ಅತ್ಯಂತ ನೈಜವಾಗಿ ಕಟ್ಟಿಕೊಡಲಾಗುತ್ತಿದೆ.

ಪ್ರಬಲ ಮಹಿಳಾ ಪಾತ್ರಗಳು: ಸದಾ ದಿಟ್ಟ, ಸ್ವಾಭಿಮಾನಿ ಹಾಗೂ ಹೋರಾಟಗಾರ್ತಿಯರಾಗಿರುವ ಟಿಎನ್‌ಎಸ್ ಕಥೆಯ ನಾಯಕಿಯರು ಮುಂದಿನ ಅಧ್ಯಾಯದಲ್ಲೂ ಕಥೆಯನ್ನು ಬಲವಾಗಿ ಮುನ್ನಡೆಸಲಿದ್ದಾರೆ.

ಹರಿತವಾದ ಸಂಭಾಷಣೆ: ವೀಕ್ಷಕರನ್ನು ಚಿಂತನೆಗೆ ಹಚ್ಚುವ, ದಿನನಿತ್ಯದ ಬದುಕಿಗೆ ಕನ್ನಡಿ ಹಿಡಿಯುವಂತಹ ಸಾಹಿತ್ಯಿಕ ಮತ್ತು ತಾರ್ಕಿಕ ಸಂಭಾಷಣೆಗಳು ಈ ವೆಬ್ ಸೀರಿಸ್‌ನ ಪ್ರಮುಖ ಆಕರ್ಷಣೆಯಾಗಲಿವೆ.

> ಇದು 16 ಎಪಿಸೋಡ್‌ಗಳ ವೆಬ್‌ಸರಣಿ, ಟಿ.ಎನ್.ಎಸ್ ಅವರ ಹಿಂದಿನ ಧಾರಾವಾಹಿಗಳ ಜನಪ್ರಿಯ ಪಾತ್ರಗಳ ಇಂದಿನ ಸ್ಥಿತಿ ಏನಾಗಿರಬಹುದು ಎನ್ನುವ ಕಥಾ ಕಲ್ಪನೆಯ ಆಧಾರದ ಮೇಲೆ ಕುತೂಹಲ ಕಾರಿಯಾದ ವೆಬ್ ಸರಣಿ ಸಿದ್ಧಪಡಿಸಲಾಗಿದೆ. ಒಟ್ಟು 16 ಎಪಿಸೋಡ್‌ಗಳಿದ್ದು, ನಿಯಮಿತವಾಗಿ ಬಿಡುಗಡೆ ಆಗಲಿದೆ. ಮೊದಲ ಸರಣಿಯಲ್ಲಿ ಮಗಳು ಜಾನಕಿಯ ಕಥೆಯನ್ನು ಆಯ್ದುಕೊಳ್ಳಲಾಗಿದೆ ಎಂದು ವಿವರಿಸಿದರು.

ಮುಕ್ತಾಯ: ಒಟ್ಟಿನಲ್ಲಿ, ಧಾರಾವಾಹಿಗಳ ಮೂಲಕ ಮನೆಮಾತಾಗಿದ್ದ ಟಿ.ಎನ್.ಸೀತಾರಾಂ, ಈಗ ಸ್ಮಾರ್ಟ್‌ಫೋನ್ ಮೂಲಕ ಇಂದಿನ ತಲೆಮಾರಿಗೆ ಮತ್ತಷ್ಟು ಹತ್ತಿರವಾಗುತ್ತಿದ್ದಾರೆ. ಹಾಸನದಲ್ಲಿ ನಡೆಯಲಿರುವ ಬಿಡುಗಡೆ ಕಾರ್ಯಕ್ರಮವು ಕನ್ನಡದ ವೆಬ್ ಸೀರಿಸ್ ಲೋಕದಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಲಿದ್ದು, ಕನ್ನಡಿಗರು ಇದನ್ನು ವೀಕ್ಷಿಸಲು ಕಾತರದಿಂದ ಕಾಯುತ್ತಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರ್, ಸುಧೀರ್ ಇದ್ದರು.

# ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳ ಚಿನ್ನದ ಸಾಧನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳು ಇತ್ತೀಚೆಗೆ ದೆಹಲಿಯ ಆಗ್ರಾದಲ್ಲಿ ನಡೆದ ನ್ಯಾಷನಲ್ ವಾಲಿಬಾಲ್ ಪಂದ್ಯಾವಳಿಯಲ್ಲಿ ಪಾಲ್ಗೊಂಡು 17 ವರ್ಷದೊಳಗಿನ ಬಾಲಕಿಯರ ತಂಡ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನಗಳಿಸಿ ಚಿನ್ನದ ಪದಕ ಪಡೆದುಕೊಂಡಿದ್ದಾರೆ.ಹಾಗೆಯೇ 14ರ ವಯೋಮಾನದೊಳಗಿನ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆಯುವ ಮೂಲಕ ಬಹುಮಾನ ತನ್ನದಾಗಿಸಿಕೊಂಡಿದ್ದಾರೆ.

ಪಂದ್ಯಾವಳಿಯಲ್ಲಿ ಪಾಲ್ಗೊಂಡು ಹಾಸನಕ್ಕೆ ಹಿಂದಿರುಗಿದ ತಂಡವನ್ನು ನಗರದ ಬಸ್ ನಿಲ್ದಾಣದಲ್ಲಿ ಪೋಷಕರು ಮತ್ತು ಕ್ರೀಡಾಸಕ್ತರು ಆತ್ಮೀಯವಾಗಿ ಬರಮಾಡಿಕೊಂಡರು.

ಈ ವೇಳೆ ತರಬೇತುದಾರರಾದ ಜಿ.ಎಸ್. ವಾಸುದೇವ್ ಅವರನ್ನು ಪೋಷಕರು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.



ಇದೇ ವೇಳೆ ಮಾತನಾಡಿದ 17 ವಯಸ್ಸಿನೊಳಗಿನ ವಿದ್ಯಾರ್ಥಿನಿಯರ ತಂಡದ ನಾಯಕಿ ಕುಮಾರಿ ಸೃಷ್ಟಿ, ಹಾಸನ ಕೇಂದ್ರಿಯ ವಿದ್ಯಾಲಯದ ವಿದ್ಯಾರ್ಥಿಗಳ ಈ ಸಾಧನೆಗೆ ಶಾಲಾ ಶಿಕ್ಷಕ ವೃಂದ ಹಾಗೂ ತರಬೇತುದಾರರಾದ ರಮೇಶ್, ವಾಸುದೇವ ಅವರ ಮಾರ್ಗದರ್ಶನದಿಂದಾಗಿ ನ್ಯಾಷನಲ್ಸ್‌ನಲ್ಲಿ ಪ್ರಥಮ ಸಾಧನೆ ಮಾಡಿದ್ದು, ನಮ್ಮ ತಂಡಕ್ಕೆ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ಶಿಕ್ಷಕರು ಪೋಷಕರಿಗೆ ಅಭಿನಂದನೆ ಸಲ್ಲಿಸಿದರು.

ಈ ವೇಳೆ ವಿದ್ಯಾರ್ಥಿಗಳಾದ ಅತಿಶ್ರೀ, ರೋಹಿಣಿ, ಸೃಷ್ಟಿ, ಗುಣಶ್ರೀ, ಜಿಯಾ, ಸಾನ್ವಿ ಹಾಗೂ 14ರ ವಯೋಮಾನದ ನಮೃತ, ದಕ್ಷತಾ, ಹಿತೈಷಿ, ಯುಕ್ತಿ, ಧನ್ಯಶ್ರೀ, ರಿಷಿತಾ, ಭವಿಷಾ, ವೈಭವಿ, ವೈಶಾಲಿ, ಲಿಖಿತ, ಶಿಕ್ಷಕಿ ರೂಪಾಲಿ ಹಾಗೂ ಪೋಷಕರು ಉಪಸ್ಥಿತರಿದ್ದರು.

# ಲಕ್ಷ ಗಾಯತ್ರಿ-ವಿಶ್ವಕರ್ಮ ಅಷ್ಟಾಕ್ಷರಿ ಜಪ ಯಾಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಶ್ವಕಲ್ಯಾಣ, ಲೋಕಶಾಂತಿ, ಉತ್ತಮ ಮಳೆ-ಬೆಳೆ, ರಾಷ್ಟ್ರದ ಸಮೃದ್ಧಿ ಹಾಗೂ ಸಮಾಜದ ಸರ್ವಾಂಗೀಣ ಅಭಿವೃದ್ಧಿಯನ್ನು ಆಶಯವಾಗಿಸಿಕೊಂಡು ಶ್ರೀ ಮನೆ ಮನೆ ಗಾಯತ್ರಿ ಮತ್ತು ಹಾಸನ ಶ್ರೀ ಗುರುಸೇವಾ ಪರಿಷತ್ ವತಿಯಿಂದ 21 ದಿನಗಳ ಲಕ್ಷ ಗಾಯತ್ರಿ, ಲಕ್ಷ ವಿಶ್ವಕರ್ಮ ಅಷ್ಟಾಕ್ಷರಿ ಜಪ ಯಾಗ ಆಯೋಜಿಸಲಾಗಿದೆ ಎಂದು ವೇದಬ್ರಹ್ಮ ಪ್ರದೀಪ್ ಶರ್ಮ ತಿಳಿಸಿದರು.




ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಚನ್ನಪಟ್ಟಣದ ಶ್ರೀ ವಿಶ್ವಬ್ರಾಹ್ಮಣ ಸದ್ವಿದ್ಯಾ ಕಾರ್ಯಾಲಯದ ಆವರಣದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ವಿಶ್ವಬ್ರಾಹ್ಮಣ ಸಮುದಾಯದವರು ಕುಟುಂಬ ಸಮೇತರಾಗಿ ತಮ್ಮ ಮನೆಗಳಲ್ಲಿ ಪ್ರತಿದಿನ ಸಾಧ್ಯವಾದಷ್ಟು ಗಾಯತ್ರಿ ಮಂತ್ರ ಹಾಗೂ ವಿಶ್ವಕರ್ಮ ಅಷ್ಟಾಕ್ಷರಿ ಮಂತ್ರವನ್ನು ಜಪಿಸಿ, ಜಪದ ಸಂಖ್ಯೆಯನ್ನು ದಾಖಲಿಸಿಕೊಂಡು ಮಹಾಯಾಗದಲ್ಲಿ ಸಮರ್ಪಿಸುವಂತೆ ಮನವಿ ಮಾಡಿದರು. ಸನಾತನ ವೈದಿಕ ಪರಂಪರೆಯಲ್ಲಿ ಗಾಯತ್ರಿ ಮಂತ್ರಕ್ಕೆ ಅತ್ಯಂತ ಮಹತ್ವದ ಸ್ಥಾನವಿದ್ದು, ಗಾಯತ್ರಿಯನ್ನು ವೇದಮಾತೆ ಹಾಗೂ ಜಗನ್ಮಾತೆಯ ರೂಪದಲ್ಲಿ ಆರಾಧಿಸಲಾಗುತ್ತದೆ. ಜ್ಞಾನ, ಬುದ್ಧಿ, ತೇಜಸ್ಸು ಮತ್ತು ಸನ್ಮಾರ್ಗದ ಪ್ರೇರಣೆಯನ್ನು ನೀಡುವ ಮಹಾಮಂತ್ರವಾಗಿ ಗಾಯತ್ರಿ ಮಂತ್ರವನ್ನು ಪರಿಗಣಿಸಲಾಗಿದೆ. ಅದೇ ರೀತಿ ವಿಶ್ವಕರ್ಮ ಪರಬ್ರಹ್ಮರನ್ನು ಸೃಷ್ಟಿ, ಸ್ಥಿತಿ ಮತ್ತು ಲಯದ ಮೂಲಶಕ್ತಿಯಾಗಿ ಆರಾಧಿಸಲಾಗುತ್ತಿದ್ದು, ವಿಶ್ವಕರ್ಮ ಅಷ್ಟಾಕ್ಷರಿ ಮಂತ್ರವು ಅವರ ಮೂಲ ಆರಾಧನಾ ಮಂತ್ರವಾಗಿದೆ ಎಂದು ಹೇಳಿದರು. ಕಶ್ಯಪ ಶಿಲ್ಪಶಾಸ್ತ್ರದಲ್ಲಿ ಗಾಯತ್ರಿ ಮತ್ತು ವಿಶ್ವಕರ್ಮರಲ್ಲಿ ಯಾವುದೇ ಭೇದವಿಲ್ಲ. ಇಬ್ಬರೂ ಮೂಲತಃ ಒಂದೇ ಸ್ವರೂಪವಾಗಿದ್ದಾರೆ ಎಂದು ಪ್ರತಿಪಾದಿಸಲಾಗಿದೆ. ಈ ಹಿನ್ನೆಲೆಯಲ್ಲಿ ಗಾಯತ್ರಿ ಮತ್ತು ವಿಶ್ವಕರ್ಮ ಅಷ್ಟಾಕ್ಷರಿ ಮಂತ್ರಗಳ ಸಾಮೂಹಿಕ ಜಪದ ಮೂಲಕ ಲೋಕಕಲ್ಯಾಣಕ್ಕಾಗಿ ಮಹಾ ಸಂಕಲ್ಪ ಕೈಗೊಳ್ಳಲಾಗಿದೆ ಎಂದರು.

ಆ.28ರಂದು ಬೆಳಿಗ್ಗೆ 6ರಿಂದ 8 ಗಂಟೆಯವರೆಗೆ ಯಜುರ್ ಉಪಾಕರ್ಮ ಆಚರಣೆ ಹಾಗೂ ಜಪ ಸಂಕಲ್ಪ ನಡೆಯಲಿದ್ದು, ಆ.29ರಂದು ಗಾಯತ್ರಿ ಪ್ರತಿಪದೆಯಿಂದ ಜಪ ಕಾರ್ಯಕ್ರಮ ಆರಂಭವಾಗಿದೆ. ಸೆ.16ರಂದು ಸಂಜೆ ಗುರು ಗಣಪತಿ ಪೂಜೆ, ನಾಂದಿ ಹಾಗೂ ನವಗ್ರಹ ಹೋಮ ನಡೆಯಲಿದೆ.

# ಮಾಡಾಳು ಸ್ವರ್ಣಗೌರಿ ದರ್ಶನಕ್ಕೆ ಅಪಾರ ಭಕ್ತ ಜನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಮಾಡಾಳು ಗ್ರಾಮದಲ್ಲಿ ಭಾದ್ರಪದ ಮಾಸದ ತದಿಗೆ ದಿನ ನೂತನ ದೇವಾಲಯದಲ್ಲಿ ಅಮ್ಮನವರನ್ನು ಪ್ರತಿಷ್ಠಾಪಿಸಲಾಯಿತು.

ಮಾಡಾಳು ನಾಡಿನ ಲಕ್ಷಾಂತರ ಮಂದಿ ಭಕ್ತರ ಆರಾಧ್ಯದೈವ ಶಕ್ತಿ ದೇವತೆ ಹಾಗೂ ಮೂಗುತಿ ಸುಂದರಿ, ಮೂಲಸ್ಥಾನ ಶ್ರೀ ಸ್ವರ್ಣಗೌರಿ ದೇವಿ ನೂತನ ದೇವಾಲಯದಲ್ಲಿ ಗೌರಿ ಹಬ್ಬದ ಅಂಗವಾಗಿ ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರ ಸಾನಿಧ್ಯದಲ್ಲಿ ಅಮ್ಮನವರನ್ನು ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ಪ್ರತಿಷ್ಠಾಪಿಸಲಾಯಿತು.

ಸೋಮವಾರ ಬೆಳಿಗ್ಗೆ ಮೂಲ ಸನ್ನಿಧಿಗೆ ಆಗಮಿಸಿದ ಶ್ರೀಗಳು ದೇವರ ಮನೆಯಲ್ಲಿ ಲಿಂಗ ಪೂಜಾ ಅನುಷ್ಠಾನ ಮಾಡಿದರು. ಬಳಿಕ ತಾಯಿ ಜಗನ್ಮಾತೆ ಅಮ್ಮನವರಿಗೆ ಮೂಗುತಿ ಧಾರಣೆ ಮಾಡಿ ಆಶೀರ್ವದಿಸಿದರು.

ಮುತ್ತೈದೆಯರು ಗಂಗಾ ಬಾವಿಗೆ ಪೂಜೆ ಸಲ್ಲಿಸಿದರು. ಗ್ರಾಮದ ಆರಾಧ್ಯ ದೈವ ಚನ್ನಬಸವೇಶ್ವರಸ್ವಾಮಿ ಹಾಗೂ ಶ್ರೀಗಳ ಸಮ್ಮುಖದಲ್ಲಿ ನೂರಾರು ಭಕ್ತರೊಡಗೂಡಿ ಮಂಗಳವಾದ್ಯ ದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವದ ಮೂಲಕ ಯರೇಹಳ್ಳಿ ರಸ್ತೆ ಬದಿ ಇರುವ ಗೌರಮ್ಮದೇವಿ ದೇವಾಲಯಕ್ಕೆ ತೆರಳಲಾಯಿತು.



ದೇವಾಲಯದಲ್ಲಿ ಶ್ರೀಗಳ ಸಮ್ಮುಖದಲ್ಲಿ ಪ್ರತಿ ಸ್ಥಾಪಿಸಿದ ನಂತರ ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದ ಶ್ರೀಗಳು, ಮಾನವನ ಬದುಕಿನಲ್ಲಿ ಶಿವಜ್ಞಾನದ ಬೀಜ ಬಿತ್ತಿ ಸತ್ ಸಂಸ್ಕಾರವನ್ನು ಕಲಿಸುವಾತನೇ ನಿಜವಾದ ಗುರು ಎಂದರು. ಮನುಷ್ಯನ ಬಾಳು ಚಿಗುರೊಡೆದು ಸಮೃದ್ಧವಾಗಲು ಗುರು ಕಾರುಣ್ಯ ಅತ್ಯಂತ ಮುಖ್ಯ. ಭಕ್ತಿಯ ಭಾವ ತುಂಬಿದ ಭಕ್ತನ ಹೃದಯವೇ ಭಗವಂತ ನೆಲೆಸಿರುವ ನಿಜವಾದ ಗುಡಿ ಎಂದು ನಮ್ಮ ಪೂಜ್ಯರು ಭಕ್ತರಿಗೆ ಬೋಧಿಸಿದ್ದಾರೆ ಎಂದು ಹೇಳಿದರು. 167 ವರ್ಷಗಳ ಇತಿಹಾಸ ಹೊಂದಿರುವ ಈ ಗ್ರಾಮವು ಜಾತ್ರಾ ಮಹೋತ್ಸವದ ಅಂಗವಾಗಿ ಮಾವಿನ ತಳಿರು ತೋರಣ ಬಾಳೆ ಕಂದುಗಳಿಂದ ಶೃಂಗರಿಸಿದ್ದು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಜನರ ಕಣ್ಮನ ಸೆಳೆಯುತ್ತಿದೆ. ದೇವಿಗೆ ಪ್ರತಿನಿತ್ಯ ತ್ರಿಕಾಲ ಪೂಜೆ ನಡೆಯಲಿದೆ ದೇವಿ ದರ್ಶನಕ್ಕೆ ರಾಜ್ಯದ ನಾನಾ ಭಾಗಗಳಿಂದ ಲಕ್ಷಾಂತರ ಮಂದಿ ಬರುವ ನಿರೀಕ್ಷೆಯಿದ್ದು ದೇವಿ ಕೃಪೆಗೆ ಪಾತ್ರರಾಗಲಿದ್ದಾರೆ.

ಸ್ವರ್ಣಗೌರಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗುತ್ತಿದ್ದು, ಸಹಸ್ರಾರು ಸಂಖ್ಯೆಯ ಭಕ್ತರು ಆಗಮಿಸುತ್ತಿದ್ದಾರೆ. ಸಂಪ್ರದಾಯದಂತೆ ಪದ್ಧತಿ ಪ್ರಕಾರ ಧಾರ್ಮಿಕ ವಿಧಿ ವಿಧಾನಗಳಿಂದ ಶ್ರೀಕಾಲ ಪೂಜೆ ನಡೆಯುತ್ತಿದೆ.

ದೇವಿ ದರ್ಶನ ಪಡೆದು ಪುನೀತರಾಗುತ್ತಿದ್ದಾರೆ. ಅಲ್ಲದೆ ಮತ್ತೆ ಕೆಲವರು ಕರ್ಪೂರ ಪ್ರಿಯ ಗೌರಮ್ಮ ತಾಯಿಗೆ ತಮ್ಮ ಕಷ್ಟ ಪರಿಹಾರಕ್ಕೆ ಹರಕೆ ತೀರಿಸಲು ದೇವಾಲಯದ ಮುಂಭಾಗ ಇರುವ ಅಗ್ನಿ ಕುಂಡಕ್ಕೆ ಕರ್ಪೂರ ಹಾಕಿ ತಲೆಯ ಮೇಲೆ ದುಗ್ಗಳದ ಬಟ್ಟಲು ಹೊತ್ತು ಹರಕೆ ತೀರಿಸುತ್ತಿದ್ದಾರೆ. ನಾನಾ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ನಾಯಕರು, ಪದಾಧಾರಿಗಳು ಹಾಗೂ ಸರ್ಕಾರದ ಹಿರಿಯ ಕಿರಿಯ ನೌಕರರು ದೇವಾಲಯಕ್ಕೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ಅಮ್ಮನವರಿಗೆ ಪೂಜೆ ಸಲ್ಲಿಸಿದರು.

ಮಂಗಳವಾರ ಮಧ್ಯಾಹ್ನ ಎಸ್ಪಿ ಶುಭನ್ವಿತಾ ಅವರು ದೇವಾಲಯಕ್ಕೆ ಭೇಟಿ ನೀಡಿ ಅಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಮಾತನಾಡಿ, ದೇವಿ ದರ್ಶನಕ್ಕೆ ರಾಜ್ಯದ ನಾನಾ ಭಾಗಗಳಿಂದ ಮಹಿಳೆಯರು ಸೇರಿದಂತೆ ಮಕ್ಕಳು ಬರುತ್ತಿದ್ದು, ಅವರಿಗೆ ಯಾವ ತೊಂದರೆಯಾಗದಂತೆ ಸೂಕ್ತ ಪೊಲೀಸ್ ಬಂದೋಬಸ್ತ್‌ಗೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದರು.

ಡಿಐಎಸ್ಪಿ ಗೋಪಿ, ಗ್ರಾಮಾಂತರ ಸಿಪಿಐ ಅರುಣ್ ಕುಮಾರ್, ಬಾಣಾವರ ಪಿಎಸ್‌ಐ ಸುರೇಶ್, ಮೂಲಸ್ಥಾನ ಸ್ವರ್ಣ ಗೌರಮ್ಮ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್ ನಟರಾಜ, ಮಾಡಾಳು ಶಿವಲಿಂಗಪ್ಪ, ಮುಖಂಡರಾದ ಎಂ.ಸಿ ನಟರಾಜ, ಕೊಡ್ಲಿ ಬಸವರಾಜ, ಎಂ.ಜಿ ಶಿವಣ್ಣ, ಆಶೋಕ್ ಮರುಳಸಿದ್ದ, ಕುಮಾರ್ ಇದ್ದರು.

# ಪ್ರಜಾಪ್ರಭುತ್ವ ಮೌಲ್ಯ-ಹಕ್ಕು ಕುರಿತು ಅರಿವು ಅಗತ್ಯ: ಸ್ವರೂಪ್ ಪ್ರಕಾಶ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಜಾಪ್ರಭುತ್ವದ ಮೌಲ್ಯ, ಸಂವಿಧಾನ ನೀಡಿರುವ ಹಕ್ಕುಗಳು ಹಾಗೂ ನಾಗರಿಕರ ಕರ್ತವ್ಯ ಕುರಿತು ಯುವಪೀಳಿಗೆಯಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ತಿಳಿಸಿದರು.

ನಗರದ ಡಿಸಿ ಕಚೇರಿ ಎದುರಿನ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಮಾಲಾರ್ಪಣೆ ಮಾಡಿದ ಬಳಿಕ ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆ, ವಿವಿಧ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಜಾಪ್ರಭುತ್ವದ ಆಶಯಗಳನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪಿಸುವುದು ಇಂದಿನ ಅಗತ್ಯವಾಗಿದೆ. ವಿಶ್ವದ ಹಲವು ರಾಷ್ಟ್ರಗಳು ಪ್ರಜಾಪ್ರಭುತ್ವ ವ್ಯವಸ್ಥೆ ಅನುಸರಿಸುತ್ತಿದ್ದು, ಜನರ ಸಕ್ರಿಯ ಪಾಲ್ಗೊಳ್ಳುವಿಕೆಯೇ ಅದರ ಪ್ರಮುಖ ಶಕ್ತಿಯಾಗಿದೆ. ಪ್ರತಿ ವರ್ಷ ಸೆ.15ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸುವ ಮೂಲಕ ಪ್ರಜಾಪ್ರಭುತ್ವದ ಮಹತ್ವ, ಮೌಲ್ಯಗಳು ಹಾಗೂ ಜನರ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ವಿಶೇಷವಾಗಿ ಯುವಜನತೆ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಸಮಗ್ರ ಅರಿವು ಹೊಂದಬೇಕು. ಚುನಾವಣೆ ಹೇಗೆ ನಡೆಯುತ್ತವೆ, ಜನಪ್ರತಿನಿಧಿಗಳು ಹೇಗೆ ಆಯ್ಕೆಯಾಗುತ್ತಾರೆ, ಸರ್ಕಾರಗಳು ಯಾವ ರೀತಿಯಲ್ಲಿ ನಿರ್ಧಾರ ಕೈಗೊಳ್ಳುತ್ತವೆ ಹಾಗೂ ಸಂವಿಧಾನ ನಾಗರಿಕರಿಗೆ ನೀಡಿರುವ ಹಕ್ಕುಗಳೇನು ಎಂಬುದನ್ನು ಯುವಪೀಳಿಗೆಗೆ ತಿಳಿಸಿ, ಇದರೊಂದಿಗೆ ಹಕ್ಕುಗಳ ಜತೆಗೆ ಕರ್ತವ್ಯಗಳ ಬಗ್ಗೆಯೂ ಅರಿವು ಮೂಡಿಸಬೇಕು ಎಂದು ಹೇಳಿದರು.

# ಸರ್ಕಾರಿ ಶಾಲೆ ಜೊತೆಗೆ ಬಾಲಮಂದಿರಕ್ಕೂ ವಿವಿಧ ಪುಸ್ತಕಗಳು ತಲುಪಲಿ:ರೂಪ ಹಾಸನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ಕಾರಿ ಶಾಲೆಯ ಮಕ್ಕಳಿಗೆ ಸೂಕ್ತವಾದ ಪುಸ್ತಕಗಳನ್ನು ನೀಡುವ ಮೂಲಕ ಶ್ಲಾಘನೀಯ ಕೆಲಸ ಕನ್ನಡ ಬರಹಗಾರರ ಹಾಗೂ ಪ್ರಕಾಶಕರ ಸಂಘ ಮಾಡಿಕೊಂಡು ಬರುತ್ತಿರುವುದು ಸಂತಸ ತಂದಿದೆ ಎಂದು ಸಾಹಿತಿ ರೂಪ ಹಾಸನ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಿದ್ದ ನೂರು ಶಾಲೆಗೆ- ನೂರು ನೂರು ಪುಸ್ತಕ ವಿತರಣೆ ಕಾರ್ಯಕ್ರಮದಲ್ಲಿ ಅವರು ಸಂಘದ ಪರಿಚಯಾತ್ಮಕ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಸರ್ಕಾರಿ ಶಾಲೆ ಮಕ್ಕಳಿಗೆ ಪುಸ್ತಕಗಳನ್ನು ಕೊಡುವ ಜೊತೆಗೆ ಪ್ರತಿ ಜಿಲ್ಲೆಯಲ್ಲಿ ಇರುವ ಬಾಲಮಂದಿರಗಳಿಗೂ ಸಹ ಪುಸ್ತಕಗಳನ್ನು ನೀಡುವ ಕೆಲಸವಾಗಲಿ ಎಂದು ಆಶಯ ವ್ಯಕ್ತಪಡಿಸಿದರಲ್ಲದೆ, ದೌರ್ಜನ್ಯಕ್ಕೆ ಒಳಗಾದ ಮಕ್ಕಳ ಪಾಲಿಗೂ ಈ ಪುಸ್ತಕಗಳು ತಲುಪಲಿ ಎಂದರು.

ಇದೇ ಸಮಯದಲ್ಲಿ ಈ ರೀತಿಯ ಮಾದರಿಯ ಕೆಲಸಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂತಾದ ಸಂಘ ಸಂಸ್ಥೆ ಇಲಾಖೆಗಳು ಮಾಡಬೇಕಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಕನ್ನಡ ಬರಹಗಾರರ ಹಾಗೂ ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಸಂಘದ ಕಾರ್ಯಗಳ ದಾರಿಯನ್ನು ವಿವರಿಸಿದರಲ್ಲದೆ, ಇಂತಹ ಕಾರ್ಯಕ್ರಮಗಳಿಗೆ ಇತರೆ ಸಂಘಟನೆಗಳು ಮುಂದಾಗಬೇಕಿದೆ ಎಂದರು.



ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಆನಂದ ಮೂರ್ತಿ ಮಾತನಾಡಿ, ಪಠ್ಯದ ಹೊರತಾಗಿಯೂ ಇತರೆ ಪುಸ್ತಗಳನ್ನು ವಿದ್ಯಾರ್ಥಿಗಳು ಓದಲು ಅನುವು ಮಾಡಿಕೊಡಬೇಕು.

ಹಿರಿಯ ಸಾಹಿತಿ ಹಾಡ್ಲಹಳ್ಳಿ ನಾಗರಾಜ್ ಮಾತನಾಡಿ, ನಾವು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಗಿನ ಶಿಕ್ಷಕರು ಸಾಹಿತ್ಯದ ಅಭಿರುಚಿ ಹೊಂದಿದ್ದವರಾಗಿದ್ದರು. ಅವರು ಶಾಲೆಯಲ್ಲಿ ಕಲಿಸಿಕೊಟ್ಟ ಕುವೆಂಪು, ಕಾರಂತ ಮುಂತಾದ ಸಾಹಿತ್ಯ ಪಾಠಗಳು ಇಂದಿಗೂ ನೆನಪಿನಲ್ಲಿವೆ. ನಂತರ ವಿಜ್ಞಾನದ ವಿದ್ಯಾರ್ಥಿ ಆದ ನಂತರವೂ ತಾನು ಸಾಹಿತ್ಯದ ಕಡೆಗೆ ಹೊರಳುವಂತೆ ಮಾಡಿತು ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಹೆಚ್.ಎಲ್ ಮಲ್ಲೇಶಗೌಡ ಮಾತನಾಡಿ, ಇಂದು ಜ್ಞಾನ ಪಡೆಯಲು ಮೊಬೈಲ್ ಸೇರಿದಂತೆ ಹಲವು ಸಾಧನಗಳಿವೆ. ಐದು ನಿಮಿಷ ಮೊಬೈಲ್‌ನಲ್ಲಿ ಹುಡುಕಿದರೂ ನಮಗೆ ಬೇಕಾದ ಮಾಹಿತಿ ಪಡೆದುಕೊಳ್ಳಬಹುದು. ಯಾವುದೇ ಪ್ರಶ್ನೆ ಕೇಳಿದರೂ ತಕ್ಷಣ ಉತ್ತರ ಸಿಗುತ್ತದೆ. ಒಬ್ಬ ಶಿಕ್ಷಕರು ತರಗತಿಯಲ್ಲಿ ಪಾಠ ಮಾಡುವಾಗ ಅವರ ಮಾತಿನಲ್ಲಿ ಇರುವ ಭಾವನೆ, ಅನುಭವ ಮತ್ತು ಸಾಹಿತ್ಯದ ಸೊಗಡನ್ನು ಮೊಬೈಲ್‌ನಲ್ಲಿ ಅದೇ ರೀತಿಯಲ್ಲಿ ಪಡೆಯಲು ಸಾಧ್ಯವಿಲ್ಲ.

ಓದು ಎನ್ನುವುದು ಅಭ್ಯಾಸ ಮಾತ್ರವಲ್ಲ. ಅದು ಸಂಸ್ಕಾರ. ಪುಸ್ತಕ ಓದುವಾಗ ಸಿಗುವ ರಸಾನುಭೂತಿಗೆ ಬೇರೆ ಯಾವ ಆಧುನಿಕ ಅನುಕೂಲಗಳಿಂದ ಸಿಗುವುದಿಲ್ಲ ಎಂದರು. ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿ ಮಲ್ಲಮ್ಮ, ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ಸಾಹಿತಿ ಭೈರಮಂಗಲ ರಾಮೇಗೌಡ ಸೇರಿ ಜಿಲ್ಲೆಯ ಬಹುತೇಕ ಶಾಲೆ ಶಿಕ್ಷಕರು ಉಪಸ್ಥಿತರಿದ್ದರು.

# ಸಂವಿಧಾನ ಉಳಿಯಬೇಕಾದರೆ ಮತದಾನದ ಬಗ್ಗೆ ಜಾಗೃತಿ ಅಗತ್ಯ: ಶಾಸಕ ಸಿಮೆಂಟ್ ಮಂಜುನಾಥ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: 'ಭಾರತದ ಸಂವಿಧಾನ ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದಾಗಿದೆ. ಪ್ರಜಾಪ್ರಭುತ್ವ ದಿನವನ್ನು ಆಚರಿಸುವುದಷ್ಟೇ ಸಾಲದು. ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢವಾಗಿ ಉಳಿಯಬೇಕಾದರೆ ಮತದಾನದ ಸಂದರ್ಭದಲ್ಲಿ ಯಾರಿಗೆ ಮತ ನೀಡಬೇಕು ಎಂಬ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಬೇಕು' ಎಂದು ಶಾಸಕ ಸಿಮೆಂಟ್ ಮಂಜುನಾಥ್ ಹೇಳಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಕರ್ನಾಟಕ ಸರ್ಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಸಂವಿಧಾನ ರಚನಾ ಸಭೆಯ ಮಹನೀಯರು ನಮಗೆ ನೀಡಿರುವ ಶ್ರೇಷ್ಠ ಸಂವಿಧಾನದ ಅಡಿಯಲ್ಲಿ ಬದುಕುತ್ತಿರುವುದು ಹೆಮ್ಮೆಯ ಸಂಗತಿ. ಜನರಿಂದ, ಜನರಿಗಾಗಿ ಮತ್ತು ಜನರ ಮೂಲಕ ನಡೆಯುವ ಆಡಳಿತ ವ್ಯವಸ್ಥೆಯೇ ಪ್ರಜಾಪ್ರಭುತ್ವ. ದೇಶದ ಆಡಳಿತ ನಡೆಸುವ ನಾಯಕರನ್ನು ಮತದಾನದ ಮೂಲಕ ಜನರೇ ಆಯ್ಕೆ ಮಾಡಿಕೊಳ್ಳುವ ಹಕ್ಕು ನಮ್ಮ ಸಂವಿಧಾನ ನೀಡಿದೆ' ಎಂದರು.




'ಕೆಲವು ದೇಶಗಳಲ್ಲಿ ರಾಜಮನೆತನದ ವಂಶಪಾರಂಪರ್ಯವಾಗಿ ಅಧಿಕಾರ ಹಸ್ತಾಂತರವಾಗುತ್ತದೆ. ಆದರೆ ಭಾರತದಲ್ಲಿ ಜನರಿಗೆ ತಮಗೆ ಸೂಕ್ತವೆನಿಸುವ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅವಕಾಶವಿದೆ. ಈ ವ್ಯವಸ್ಥೆಯ ಮೂಲಕ ದೇಶದ ಕಟ್ಟಕಡೆಯ ಪ್ರಜೆಗೂ ತನ್ನ ನಾಯಕನನ್ನು ಆಯ್ಕೆ ಮಾಡುವ ಹಕ್ಕು ದೊರೆತಿದೆ' ಎಂದು ಹೇಳಿದರು.

'ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆ ಭಾರತಕ್ಕಿದೆ. ಇದಕ್ಕೆ ಭದ್ರವಾದ ಅಡಿಪಾಯ ಹಾಕಿರುವುದು ಸಂವಿಧಾನ. ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಸಂವಿಧಾನ ಪ್ರತಿಪಾದಿಸಿದೆ. ಜಾತಿ, ಧರ್ಮ, ಬಡವ?ಶ್ರೀಮಂತ ಎಂಬ ಯಾವುದೇ ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಮತ್ತು ಸಾಮಾಜಿಕ ನ್ಯಾಯ ದೊರೆಯಬೇಕು' ಎಂದರು.

'ಮತದಾನದ ಸಂದರ್ಭದಲ್ಲಿ ಪ್ರತಿಯೊಬ್ಬರ ಮತಕ್ಕೂ ಒಂದೇ ಮೌಲ್ಯ ಇರುವುದು ಪ್ರಜಾಪ್ರಭುತ್ವದ ನಿಜವಾದ ಶಕ್ತಿ. ಜನಪ್ರತಿನಿಧಿಗಳು ಅಧಿಕಾರದಲ್ಲಿರುವವರು ಎಂಬ ಭಾವನೆಗಿಂತ, ಜನರು ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುವ ಸೇವಕರು ಎಂಬ ಮನೋಭಾವ ಹೊಂದಬೇಕು' ಎಂದು ಹೇಳಿದರು.

ಇದಕ್ಕೂ ಮುನ್ನ ತಾಲ್ಲೂಕು ಕಚೇರಿ ಮುಂಭಾಗದಲ್ಲಿರುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಬಳಿಕ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಪ್ರತಿಯೊಬ್ಬ ಪ್ರಜೆಗೂ ಸಂವಿಧಾನ ಹಾಗೂ ಅದರ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248